**ಕರ್ನಾಟಕ ಸರ್ಕಾರ**

6

ಸಂ:ಗ್ರಾಅಪ/03/ಗಣಕ ಕೋಶ-2013

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ,
ಬೆಂಗಳೂರು,ದಿನಾಂಕ:27.01.2014

ಇಂದ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
ಬಹುಮಹಡಿಗಳ ಕಟ್ಟಡ
ಬೆಂಗಳೂರು-01.

ಇವರಿಗೆ
ರಾಜ್ಯದ ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯತ್. 30

ಮಾನ್ಯರೇ,

ವಿಷಯ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಡಿಯಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ಕಾಮಗಾರಿಗಳ ಪಾವತಿಯನ್ನು ವರ್ಕ್‌ಸಾಫ್ಟ್ ತಂತ್ರಾಂಶದ ಮೂಲಕ ಮಾಡುವ ಕುರಿತು.

ಉಲ್ಲೇಖ: 1. ಈ ಕಛೇರಿಯ ಸುತ್ತೋಲೆ ಸಮ ಸಂಖ್ಯೆ ದಿನಾಂಕ:20.09.2013.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಉತ್ತರ ಕನ್ನಡ ಜಿಲ್ಲಾ ಪಂಚಾಯತ್, ಕಾರವಾರ ಇವರ ಪತ್ರ ಸಂ:ಉ.ಕ/ಜಿ.ಪಂ/ಆರ್ಥಿಕ/ಎ-7/2013-14, ದಿನಾಂಕ:07.01.2014.
3. ಸರ್ಕಾರದ ಅ.ಸ.ಪ.ಸಂ: ಗ್ರಾಅಪ/03/ಗಣಕ ಕೋಶ-2014, ದಿನಾಂಕ:20.01.2014.

******

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಡಿಯಲ್ಲಿ ಅಭಿವೃದ್ಧಿಪಡಿಸಿರುವ ವರ್ಕ್‌ಸಾಫ್ಟ್ ತಂತ್ರಾಂಶದ ಬಳಕೆಯನ್ನು ದಿನಾಂಕ:02.10.2013ರಿಂದ ಕೆಲವೊಂದು ಯೋಜನೆಗಳಿಗೆ ಕಡ್ಡಾಯಗೊಳಿಸಿ ಮತ್ತು ಈ ಯೋಜನೆಯಡಿಯಲ್ಲಿ ತೆಗೆದುಕೊಳ್ಳಲಾಗುವ ಕಾಮಗಾರಿಗಳಿಗೆ ದಿನಾಂಕ:03.10.2013 ರಿಂದ ತಂತ್ರಾಂಶದ ಹೊರಗಡೆ ಬಿಲ್ಲುಗಳನ್ನು ಪಾವತಿಸಲು ನಿಷೇಧಿಸಲಾಗಿದೆ ಎಂದು ಉಲ್ಲೇಖ(1)ರ ಸುತ್ತೋಲೆಯಲ್ಲಿ ತಿಳಿಸಲಾಗಿರುತ್ತದೆ.

ಪ್ರಸ್ತುತ ಸವಿವರ ಲೆಕ್ಕಶೀರ್ಷಿಕೆವಾರು ವಿವರಗಳನ್ನು ಅನುಬಂಧದಲ್ಲಿ ಈ ಪತ್ರದೊಂದಿಗೆ ಲಗತ್ತಿಸಿದೆ. ಸದರಿ ಲೆಕ್ಕಶೀರ್ಷಿಕೆಗಳಡಿ ಖಜಾನೆಗೆ ಸಲ್ಲಿಕೆಯಾಗುವ ಕಾಮಗಾರಿ ಬಿಲ್ಲುಗಳೊಂದಿಗೆ "ಗಾಂಧಿ ಸಾಕ್ಷಿ ಕಾಯಕ" ತಂತ್ರಾಂಶದಿಂದ ಪಡೆಯಲಾದ ಪಾವತಿ-ಆದೇಶವಿದ್ದಲ್ಲಿ ಮಾತ್ರ ಪಾವತಿ ಮಾಡಲು ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ನಿರ್ದೇಶಕರು ಖಜಾನೆ ಇಲಾಖೆ ಬೆಂಗಳೂರು ಇವರನ್ನು ಉಲ್ಲೇಖ(3)ರ ಪತ್ರದಲ್ಲಿ ಕೋರಲಾಗಿದೆ. ಸದರಿ ಪತ್ರದ ಪ್ರತಿಯನ್ನು ಹಾಗೂ ಲೆಕ್ಕ ಶೀರ್ಷಿಕೆವಾರು ವಿವರವನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.

ತಮ್ಮ ವಿಶ್ವಾಸಿ,

(ರೋಹಿಣಿ ಸಿಂಧೂರಿ)
ನಿರ್ದೇಶಕರು(ಇ-ಆಡಳಿತ) ಮತ್ತು
ಸ್ವಉದ್ಯೋಗ ಕಾರ್ಯಕ್ರಮ ಹಾಗೂ
ಪ/ನಿ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಹೊರಡಿಸಿದೆ
ದಿನಾಂಕ 29/1/14
ಗ್ರಾ.ಅ.ಪಂ. ಇಲಾಖೆ